ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಆರ್. ಕೃಷ್ಣ ಕುಮಾರ್

ಮೆ:ಜೆಎಸ್ಡಬ್ಲೂ ಸ್ಟೀಲ್ ಅಮಿಟೆಡ್ -ವಿರುದ್ಧಕರ್ನಾಟಕ ರಾಜ್ಯ ಸರ್ಕಾರ

(ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ) ಮತ್ತು ಇತರರು*

ರಿಟ್ ಅರ್ಜಿಸಂಖ್ಯೆ: 16413/2018, ದಿನಾಂಕ 4 ನೇ ರವೆಂಬರ್, 2019.

ಆಜ್ಞೆ

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

ದಿನಾಂಕ:30 ನೇ ಅಕ್ಟೋಬರ್, 2019 ರಂದು ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ನಾವು ಆಲಿಸಿದ್ದೇವೆ.ಸಮಯ ನೀಡಲು ಅವರು ಮನವಿ ಮಾಡಿಕೊಂಡಿದ್ದರಿಂದ, ನಾವು ಅರ್ಜಿಯನ್ನು ವಿಲೆ ಮಾಡದೆ ಇಂದಿನವರೆಗೆ ಮುಂದೂಡಿದ್ದೆವು.

2. ಈ ದಿನ, ನಾವು ಅವಕಾಶ ನೀಡಿರುವ ಹೆಚ್ಚಿನ ನಿವೇದನೆಗಳನ್ನು ಸಲ್ಲಿಸಲು ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಅನುಮತಿಯನ್ನು ಕೋರಿದ್ದಾರೆ.ಅದೇ ರೀತಿಯಲ್ಲಿ, ನಾವು ರಾಜ್ಯದ ಪರ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರ ನಿವೇದನೆಗಳನ್ನು ಸಹ ಆಲಿಸಿದ್ದೇವೆ.

ಸಂಗತಿಗಳು:

3. ಅರ್ಜಿದಾರರ ಕ್ಲೇಮೆಂದರೆ ಅದು ದೇಶದಲ್ಲೇ ಅತ್ಯಂತ ದೊಡ್ಡ ಸಂಘಟಿತ ಉಕ್ಕು ಸ್ಥಾವರವಾಗಿದೆ.ಸದರಿ ಯೋಜನೆಯ ಪ್ರಯೋಜನಕ್ಕಾಗಿ ಹೆಚ್ಚುವರಿ ಭೂಮಿಯ ಹಂಚಿಕೆಗೆ ಅರ್ಜಿದಾರರು ಅರ್ಜಿ ಸಲ್ಲಿಸಿದ್ದರೆಂದು ಕಂಡುಬಂದಿದೆ.ಕರ್ನಾಟಕ ಸರ್ಕಾರವು ಹೊರಡಿಸಿದದಿನಾಂಕ: 11 ನೇ ಮಾರ್ಚ್, 2011 ರ ಆದೇಶದ ಆಧಾರದ ಮೇಲೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಸಂಕ್ಷಿಪ್ತವಾಗಿ ' ಸದರಿ ಮಂಡಳಿ), ಏಕ ಘಟಕ ಯೋಜನೆಯಾಗಿ ನೀರು ಸಂಗ್ರಹಣಾ ಜಲಾಶಯದ ನಿರ್ಮಾಣಕ್ಕಾಗಿ 629.92 ಎಕರೆ ಅಳತೆಯ ಭೂಮಿಯನ್ನು ಹಂಚಿಕೆ ಮಾಡಿದೆ.ಸದರಿ ಮಂಡಳಿಯುದಿನಾಂಕ: 07 ನೇ ಏಪ್ರಿಲ್, 2015 ರಂದು ಪತ್ರವನ್ನು ಬರೆದು, ಸದರಿ ಪತ್ರದಲ್ಲಿ ಹೇಳಿದ ಷರತ್ತುಗಳಿಗೆ ಒಳಪಟ್ಟು, 99 ವರ್ಷಗಳ ಅವಧಿಗಾಗಿ ಗಣಿ ಗುತ್ತಿಗೆಯನ್ನು ಮಂಜೂರು ಮಾಡಲಾಗುವುದೆಂದು ಉಪಬಂಧಿಸಲಾಗಿತ್ತು.ಸದರಿ ಹಂಚಿಕೆಯ ಆಧಾರದ ಮೇಲೆ, 99 ವರ್ಷಗಳ ಅವಧಿಗಾಗಿ 629.92 ಎಕರೆಗಳ ಪ್ರದೇಶದ ಸಂಬಂಧದಲ್ಲಿ ಅರ್ಜಿದಾರರ ಪರವಾಗಿದಿನಾಂಕ: 10 ನೇ ಏಪ್ರಿಲ್, 2015 ರಂದು ಸದರಿ ಮಂಡಳಿಯು ಗಣಿ ಗುತ್ತಿಗೆಯನ್ನು ಬರೆದುಕೊಟ್ಟಿತ್ತು.

4. ಆ ತರುವಾಯ, ಅರ್ಜಿದಾರರು ವಿವಿಧ ಪ್ರಾಧಿಕಾರಗಳೊಂದಿಗೆ ಪತ್ರ ವ್ಯವಹಾರ ನಡೆಸಿದ್ದಾರೆ.ಅರ್ಜಿದಾರರು ಸದರಿ ಪತ್ರಗಳಲ್ಲಿ, ಜಲಾಶಯಗಳ ನಿರ್ಮಾಣದ ಕಾಮಗಾರಿಯು ಸಂಪೂರ್ಣವಾಗಿ ಮಣ್ಣಿನ ಒಡ್ಡನ್ನು ಕಟ್ಟುವುದಾಗಿದೆ ಎಂಬುದನ್ನು ಒತ್ತಿ ಹೇಳಿದ್ದಾರೆ.ಅರ್ಜಿದಾರರು ಸದರಿ 629.29 ಎಕರೆಗಳ ಪ್ರದೇಶದಲ್ಲಿ ಮಣ್ಣಿನ ಒಡ್ಡಿನ ನಿರ್ಮಾಣಕ್ಕಾಗಿ ಅಗೆಯುವ ಮತ್ತು ಅದರಲ್ಲಿನ ಮಣ್ಣಿನ ಮರು-ಬಳಕೆ ಮಾಡುವುದಕ್ಕಾಗಿ ಮನವಿ ಮಾಡಿಕೊಂಡಿದ್ದರು.ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು, 29 ನೇ ನವಂಬರ್, 2019 ರ ಪತ್ರದ ಮೂಲಕ,

ರಾಯಧನ ಸಂದಾಯದ ಆಧಾರದ ಮೇಲೆ ಜಲಾಶಯದ ಕಾಮಗಾರಿಯ ಅನುಷ್ಠಾನದ ಅವಧಿಯಲ್ಲಿ ಹೊರತೆಗೆಯಲಾಗುವ ಸಣ್ಣ ಖನಿಜಗಳ ಬಳಕೆಗಾಗಿ ಅನುಮತಿಯನ್ನು ಮಂಜೂರು ಮಾಡಲು ಸರ್ಕಾರದ ಕಾರ್ಯದರ್ಶಿಯವರಲ್ಲಿ ಮನವಿ ಮಾಡಿಕೊಂಡಿದ್ದರು.ದಿನಾಂಕ: 12 ನೇ ಏಪ್ರಿಲ್, 2017 ರಂದು, ಸರ್ಕಾರದ ಕಾರ್ಯದರ್ಶಿಗಳು, ಸದರಿ ಮಂಡಳಿಯ ಮುಖಾಂತರ ಆರ್ಜಿಸಿದ ಭೂಮಿಯಲ್ಲಿ ನಿರ್ಮಾಣದ ಅವಧಿಯಲ್ಲಿ ಹೊರತೆಗೆದ ಸಣ್ಣ ಖನಿಜಗಳ ಬಳಕೆಗೆ ಅನುಮತಿಯನ್ನು ನೀಡಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಿಗೆ ಪತ್ರವನ್ನು ಬರೆದರು.

5. ಕರ್ನಾಟಕ ಸರ್ಕಾರವು, ಸದರಿ ಕೆಲಸದ ಆದೇಶದಲ್ಲಿ ಸೇರಿಸಿದ ಷರತ್ತುಗಳಿಗೆ ಒಳಪಟ್ಟು ಜಲಾಶಯದ ಬಳಕೆ ಮೂಲಕ ಹೊರತೆಗೆಯುವ ಖನಿಜಗಳು ಮತ್ತು ಇತರ ಸಣ್ಣ ಖನಿಜಗಳ ಬಳಕೆಗೆ ಅನುಮತಿಯನ್ನು ನೀಡಿ,ದಿನಾಂಕ: 04 ನೇ ಅಕ್ಟೋಬರ್, 2017 ರಂದು ಕಾಮಗಾರಿ ಆದೇಶವನ್ನು ಹೊರಡಿಸಿತ್ತು.ದಿನಾಂಕ: 24 ನೇ ಮೇ, 2017 ರಂದು, ಅರ್ಜಿದಾರರು, ಕೃತಕ ಜಲಾಶಯ ನಿರ್ಮಾಣಕ್ಕಾಗಿ ಸಣ್ಣ ಖನಿಜಗಳ ಬಳಕೆಗೆ ರಾಯಧನ ಶುಲ್ಕಗಳನ್ನು ಮುಂಗಡವಾಗಿ ಸಂದಾಯ ಮಾಡುವ ಮೂಲಕ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರಿಗೆ ಚೆಕ್ ಮೂಲಕ 4,00,00,000/- ರೂ.ಗಳ ಮೊತ್ತವನ್ನು ಸಂದಾಯ ಮಾಡಿದ್ದರು.

6. ಮೂಲತಃ ಸಲ್ಲಿಸಿದ ರಿಟ್ ಅರ್ಜಿಯಲ್ಲಿ,ದಿನಾಂಕ: 04 ನೇ ಅಕ್ಟೋಬರ್, 2017 ರ ಕೆಲಸದ ಆದೇಶದಲ್ಲಿನ ಷರತ್ತುಸಂಖ್ಯೆ: 1 ನ್ನು ಪ್ರಶ್ನಿಸಲಾಗಿತ್ತು (ಅನುಬಂಧ-ಸಿ), ಬಳಕೆಗಾಗಿ ಹೊರತೆಗೆದ ಖನಿಜಗಳ ಮೇಲೆ ರಾಯಧನ ಶುಲ್ಕ ವಿಧಿಸಲು ಕರ್ನಾಟಕ ಸಣ್ಣ ಖನಿಜಗಳ ವಿನಾಯಿತಿ ನಿಯಮಗಳು, 1994 ರ (ಸಂಕ್ಷಿಪ್ತವಾಗಿ ' ಸದರಿ ನಿಯಮಗಳು) 3 ಎ ಮತ್ತು 36 ನೇ ನಿಯಮಗಳು ಪ್ರತಿವಾದಿಗಳಿಗೆ ಅಧಿಕಾರ ನೀಡುವುದಿಲ್ಲ.ತರುವಾಯದಲ್ಲಿ, ಕೆಲವು ಕಂಡಿಕೆಗಳನ್ನು ಮತ್ತು ಕಾರಣಗಳನ್ನು ಸೇರಿಸುವುದಕ್ಕಾಗಿ ಹಾಗೂ ಮೇಲೆ ಹೇಳಿದ ಕೆಲಸದ ಆದೇಶದಲ್ಲಿನ ಮೊದಲನೇ ಷರತ್ತಿಗೆ ಪ್ರಶ್ನೆಯನ್ನು ಸೇರಿಸಿರುವ ಮೊದಲನೇ ಮನವಿಯನ್ನು ಬಿಟ್ಟುಬಿಡುವುದಕ್ಕಾಗಿ ತಿದ್ದುಪಡಿ ಕೋರಿ ಐ.ಎ.ಸಂಖ್ಯೆ: 2/2019 ರಲ್ಲಿ ತಿದ್ದುಪಡಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿತ್ತು.ಅದನ್ನು ಪುರಸ್ಕರಿಸಲಾಗಿದೆ.ಕೃತಕ ಕೆರೆ ನಿರ್ಮಾಣಕ್ಕಾಗಿ ಬಳಸಲಾಗಿರುವ ಭೂಮಿಯಿಂದ ಹೊರತೆಗೆದ ಖನಿಜಗಳ ಮೇಲೆ ಪ್ರತಿವಾದಿಗಳು ರಾಯಧನ ಸಂಗ್ರಹಿಸಿರುವುದಕ್ಕೆ ಕಾನೂನಿನ ಅಧಿಕಾರ ಇಲ್ಲವೆಂಬ ಘೋಷಣೆಯನ್ನು ಕ್ಲೇಮು ಮಾಡಿ ತಿದ್ದುಪಡಿ ರೂಪದಲ್ಲಿ ಮನವಿಯನ್ನು ಸೇರಿಸಲಾಗಿತ್ತು.

ನಿವೇದನೆಗಳು:

7. ಮುಂಚಿನ ದಿನಾಂಕದಂದು, ಕಲ್ಲು ಗಣಿಗಾರಿಕೆ ಗುತ್ತಿಗೆ ಅಥವಾ ಪರವಾನಗಿಯನ್ನು ಪಡೆದುಕೊಳ್ಳುವುದರಿಂದ ಹಾಗೂ ಸದರಿ ನಿಯಮಗಳ 8 ನೇ ನಿಯಮದ 1- ಎ ಉಪ-ನಿಯಮದ ಉಪಬಂಧಗಳಿಂದ ವಿನಾಯಿತಿ ನೀಡುವ ಸದರಿ ನಿಯಮಗಳ 3 ಎ ನಿಯಮವು ಯಥಾರ್ಥವಾಗಿ ಅನ್ವಯವಾಗುವುದೆಂದು ಅಪೀಲುದಾರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ನೀರಿಗಾಗಿ ಬಾವಿಗಳನ್ನು ನೋಡುವುದಕ್ಕೆ ಅನ್ವಯವಾಗುವ 3 ಎ ನಿಯಮವು ಕೆರೆ ನಿರ್ಮಾಣಕ್ಕಾಗಿ ನೆಲ ಅಗೆಯುವುದಕ್ಕೆ ಅನ್ವಯವಾಗುತ್ತಿದ್ದು, ಅದು ಬಾವಿ ನಿರ್ಮಾಣಕ್ಕೆ ಸಮನಾಗಿದೆ ಎಂಬುದಾಗಿ ವಾದಿಸಲಾಗಿದೆ.ಇಂದು, 3 ಎ ಪ್ರಕರಣದ ಎ ಖಂಡವು 629.92 ಎಕರೆಗಳ ಪ್ರದೇಶದಿಂದ ಹೊರತೆಗೆದ ಸಣ್ಣ ಖನಿಜವನ್ನು ಜಲಾಶಯದ ಅಡಿಪಾಯವನ್ನು ಹಾಕುವುದಕ್ಕಾಗಿ ಬಳಸಲಾಗುವುದೆಂಬುದಾಗಿ

ಅನ್ವಯ ವಾಗುವುದರಿಂದ, ಅದು ಕಟ್ಟಡದ ಅಡಿಪಾಯಕ್ಕೆ ನೆಲ ಅಗೆಯುವುದಕ್ಕೆ ಸಮನಾಗಿದೆ ಎಂಬುದಾಗಿ ನಿವೇದಿಸಿಕೊಳ್ಳಲಾಗಿದೆ.

8. ಈ ಕಾಮಗಾರಿಯನ್ನು, ಸದರಿ ನಿಯಮಗಳ 3 ಎ ನಿಯಮದ ಪ್ರಕಾರ, ಕೃತಕ ಜಲಾಶಯ ನಿರ್ಮಾಣದ ಅಡಿಪಾಯದ ಕಾಮಗಾರಿಗಳಲ್ಲೊಂದೆಂಬುದಾಗಿ ಪರಿಗಣಿಸಬೇಕೆಂದು ನಿರ್ದಿಷ್ಟವಾಗಿ ನಿರ್ದೇಶಿಸಿ, ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆಯ ಕಾರ್ಯದರ್ಶಿಯವರು ಬರೆದದಿನಾಂಕ: 12 ನೇ ಏಪ್ರಿಲ್, 2017 ರ ಪತ್ರದ (ಅನುಬಂಧ-ಜಿ) ಕಡೆ ನಮ್ಮ ಗಮನ ಸೆಳೆಯಲಾಗಿರುವುದರಿಂದ, ರಾಜ್ಯ ಸರ್ಕಾರವು ಸಹ, ಸದರಿ ನಿಯಮಗಳ 3 ಎ ನಿಯಮದ ಅಡಿಯಲ್ಲಿ ಉಪಬಂಧಿಸಲಾಗಿರುವ ವಿನಾಯಿತಿಯು ಕಾಮಗಾರಿಗೆ ಅನ್ವಯವಾಗುತ್ತದೆಂಬುದನ್ನು ಒಪ್ಪಿಕೊಂಡಿದೆ.

9. ವಾದದ ಎರಡನೇ ಭಾಗವು, ಮಹಾರಾಷ್ಟ್ರ ಕಂದಾಯ ಸಂಹಿತೆ, 1966 ರ (ಸಂಕ್ಷಿಪ್ತವಾಗಿ ' ಸದರಿ ಸಂಹಿತೆ) 48 ( 7) ನೇ ಪ್ರಕರಣವನ್ನು ಚರ್ಚಿಸಿರುವ ಪ್ರೊಮೋಟರ್ ಅಂಡ್ ಬಿಲ್ಡರ್ ಅಸೋಸಿಯೇಷನ್ ಆಫ್ ಪುಣೆ –ವಿರುದ್ಧ ಮಹಾರಾಷ್ಟ್ರ ಸರ್ಕಾರ ಮತ್ತು ಇತರರು ' ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯದ ಚ ನಿರ್ಣಯವನ್ನಾಧರಿಸಿದೆ.ಭೂಮಿಯಿಂದ ಹೊರತೆಗೆದ ಸಣ್ಣ ಖನಿಜಗಳನ್ನು ಅದೇ ಭೂಮಿಯ ಮೇಲೆ ಜಲಾಶಯದ ಅಡಿಪಾಯವನ್ನು ಹಾಕುವುದಕ್ಕೆ ಬಳಸಲಾಗುವುದರಿಂದ, ಮೊದಲನೆಯದಾಗಿ, 3 ಎ ನಿಯಮವು ಅನ್ವಯವಾಗುತ್ತದೆ ಮತ್ತು ಎರಡನೆಯದಾಗಿ, ಯಾವುದೇ ಸಂದರ್ಭದಲ್ಲೂ, 36 ನೇ ನಿಯಮಕ್ಕನುಸಾರವಾಗಿ ರಾಯಧನವನ್ನು ಸಂದಾಯ ಮಾಡುವಂತಿಲ್ಲವೆಂದು ನಿವೇದಿಸಿಕೊಳ್ಳಲಾಗಿದೆ.ಹೊರತೆಗೆದ ಸಣ್ಣ ಖನಿಜಗಳನ್ನು ಮೂರನೇ ಪಕ್ಷಕಾರರಿಗೆ ಮಾರಾಟ ಮಾಡಿದರೆ ಮಾತ್ರವೇ, ರಾಜ್ಯ ಸರ್ಕಾರಕ್ಕೆ ರಾಯಧನ ಸಂದಾಯ ಮಾಡುವ ಪ್ರಶ್ನೆಯು ಉದ್ಭವವಾಗುತ್ತದೆ ಎಂದು ವಾದಿಸುವ ಮೂಲಕ 3 ಎ ನಿಯಮದ ಎರಡನೇ ಪರಂತುಕವನ್ನು ಅವಲಂಬಿಸಲಾಗಿದೆ.ಮತ್ತೊಂದು ನಿವೇದನೆಯೆಂದರೆ, ಇಂಡಿಯಾ ಸಿಮೆಂಟ್ ಅಮಿಟೆಡ್ ಮತ್ತು ಇತರರು -ವಿರುದ್ಧ-ತಮಿಳು ನಾಡು ರಾಜ್ಯ ಸರ್ಕಾರ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಚ ಅಭಿಪ್ರಾಯಪಟ್ಟಿರುವಂತೆ, ರಾಯಧನವು ತೆರಿಗೆಯಾಗಿರುವುದರಿಂದ, ಅದನ್ನು ಕಾನೂನುಬಾಹಿರವಾಗಿ ಸಂಗ್ರಹಿಸಲಾಗುವುದಿಲ್ಲ.

10. ಪರವಾನಗಿ ಅಥವಾ ಕಲ್ಲು ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಮಾತ್ರವೇ 36 ನೇ ನಿಯಮವನ್ನು ಅನ್ವಯಿಸ ಬಹುದಾಗಿರುವುದರಿಂದ, ರಾಯಧನ ತಗಾದೆಯು ಸಂಪೂರ್ಣವಾಗಿ ಕಾನೂನುಬಾಹಿರವಾದುದಾಗಿದೆ ಮತ್ತು ತಳ್ಳಿಹಾಕಲು ಯೋಗ್ಯವಾಗಿದೆ ಎಂದು ನಿವೇದಿಸಿಕೊಳ್ಳಲಾಗಿದೆ.ಅರ್ಜಿದಾರರು, ನಾಗರಿಕರ ನೀರು ಸರಬರಾಜಿನ ಮೇಲೆ ಪರಿಣಾಮ ಬೀರದೆ ತನ್ನದೇ ಸ್ವಂತ ಜಲಾಶಯಗಳನ್ನು ನಿರ್ಮಿಸಿಕೊಳ್ಳಬಹುದಾದ ಹಾಗೆ ಜಲಾಶಯ ನಿರ್ಮಾಣಕ್ಕೆ ಅನುಮತಿಯನ್ನು ನೀಡಲಾಗಿದೆ ಎಂಬುದು ಮತ್ತೊಂದು ನಿವೇದನೆಯಾಗಿದೆ.ರಾಜ್ಯ ಸರ್ಕಾರಕ್ಕೆ ಅರ್ಜಿದಾರರು ಸಾಕಷ್ಟು ಮೊತ್ತವನ್ನು ಸಂದಾಯ ಮಾಡಿದ್ದಾರೆ ಎಂದು ನಿವೇದಿಸಿಕೊಳ್ಳಲಾಗಿದೆ.ಆದುದರಿಂದ, ರಾಯಧನ ಸಂದಾಯವು ಕಾನೂನುಬಾಹಿರವಾದುದಾಗಿದ್ದು, ತಳ್ಳಿಹಾಕಲು ಯೋಗ್ಯವಾಗಿದೆ ಎಂದು ನಿವೇದಿಸಿಕೊಳ್ಳಲಾಗಿದೆ.

11. ಮಾನ್ಯ ಸಹಾಯಕ ಸರ್ಕಾರಿ ವಕೀಲರು, ದಾಖಲೆಯಲ್ಲಿರುವ ಹಲವಾರು ದಸ್ತಾವೇಜುಗಳ ಕಡೆ ಗಮನ ಸೆಳೆಯುವ ಮೂಲಕ, ಪ್ರಶ್ನಿತ ರಾಯಧನ ಸಂದಾಯವನ್ನು ಸಮರ್ಥಿಸಿಕೊಂಡಿದ್ದಾರೆ.

ನಿವೇದನೆಗಳ ಪರಿಶೀಲನೆ:

12. ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ.1 ನೇ ಮನವಿ ಖಂಡವನ್ನು ಬಿಟ್ಟುಬಿಟ್ಟಿರುವುದರಿಂದ, ಸದರಿ ನಿಯಮಗಳ 3 ಎ ನಿಯಮವಾಗಲಿ ಅಥವಾ 36 ನೇ ನಿಯಮವಾಗಲಿ, ಸ್ವಂತ-ಬಳಕೆಗಾಗಿ ಹೊರತೆಗೆದ ಖನಿಜಗಳ ಮೇಲೆ ರಾಯಧನವನ್ನು ವಿಧಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದಿಲ್ಲವೆಂದು ಘೋಷಿಸುವಂತೆ ಕೋರಿರುವ ಎರಡನೇ ಮನವಿಯು ಪರಿಶೀಲನೆಗೆ ಉಳಿದಿರುವ ಮನವಿಯಾಗಿದೆ.1994 ರ ಸದರಿ ನಿಯಮಗಳ 3 ಎ ನಿಯಮದ ಅಡಿಯಲ್ಲಿ ಅರ್ಜಿದಾರರು ವಿನಾಯಿತಿಯನ್ನು ಕ್ಲೇಮು ಮಾಡಿದ್ದಾರೆ.ಆದುದರಿಂದ, 1994 ರ ಸದರಿ ನಿಯಮಗಳ 3 ನೇ ಮತ್ತು 3 ನಿಯಮಗಳನ್ನು ಉದ್ಧರಿಸುವುದು ಅವಶ್ಯಕವಾಗಿದ್ದು, ಅವುಗಳನ್ನು ಈ ಕೆಳಗಿನಂತೆ ಓದಲಾಗಿದೆ:

3. ಕಲ್ಲು ಗಣಿಗಾರಿಕೆ ಗುತ್ತಿಗೆ ಅಥವಾ ಕಲ್ಲು ಗಣಿಗಾರಿಕೆ ಪರವಾನಗಿಯ ಮೇರೆಗೆ ಕಲ್ಲು ಗಣಿಗಾರಿಕೆ.- ( 1) ಯಾರೇ ವ್ಯಕ್ತಿಯು, ಈ ನಿಯಮಗಳ ಅಡಿಯಲ್ಲಿ ಮಂಜೂರು ಮಾಡಿದ ಕಲ್ಲು ಗಣಿಗಾರಿಕೆ ಗುತ್ತಿಗೆಯ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಅಥವಾ ಅವುಗಳಿಗೆ ಅನುಸಾರವಾಗಿ ಹೊರತುಪಡಿಸಿ, ಯಾವುದೇ ಭೂಮಿಯಲ್ಲಿ ಯಾವುದೇ ಸಣ್ಣ ಖನಿಜದ ಸಂಬಂಧದಲ್ಲಿ ಯಾವುದೇ ಕಲ್ಲು ಗಣಿಗಾರಿಕೆ ಕಾರಾಚರಣೆಯನ್ನು ಕೈಗೊಳ್ಳತಕ್ಕದ್ದಲ್ಲ.

(2) ಯಾವುದೇ ಕಲ್ಲು ಗಣಿಗಾರಿಕೆ ಗುತ್ತಿಗೆಯನ್ನು ಈ ನಿಯಮಗಳಿಗನುಸಾರವಾಗಿ ಹೊರತು ಅನ್ಯಥಾ ಮಂಜೂರು ಮಾಡತಕ್ಕದ್ದಲ್ಲ.

3 ಎ. ಕೆಲವು ಮೊಕದ್ದಮೆಗಳಲ್ಲಿ ಕೆಲವು ನಿಯಮಗಳಿಗೆ ವಿನಾಯಿತಿ.ಈ ಮುಂದಿನ ಕಾರಚಟುವಟಿಕೆಗಳನ್ನು ಕಲ್ಲು ಗಣಿಗಾರಿಕೆ ಗುತ್ತಿಗೆ ಅಥವಾ ಪರವಾನಗಿಯನ್ನು ಪಡೆದುಕೊಳ್ಳುವುದರಿಂದ ಹಾಗೂ 8 ನೇ ನಿಯಮದ ( 1-ಎ) ಉಪ-ನಿಯಮದ ಮತ್ತು ಅಧ್ಯಾಯ II- ಎ ಇದರ ಉಪಬ ಂ ಧಗಳಿ ಂ ದ ವಿನಾಯಿತಿ ನೀಡಲಾಗಿದೆ, ಅವುಗಳೆ ಂ ದರೆ.

(ಎ) ನೀರಿಗಾಗಿ ಬಾವಿಗಳನ್ನು ನೋಡುವುದು ಮತ್ತು ಕಟ್ಟಡದ ಅಡಿಪಾಯಕ್ಕಾಗಿ ನೆಲವನ್ನು ಅಗೆಯುವುದು ಮತ್ತು ಅದರಿಂದ ಹೊರತೆಗೆದ ಸಣ್ಣ ಖನಿಜಗಳ ವಿಲೆ ಮಾಡುವುದು; ಮತ್ತು

(ಬಿ) ಕೃಷಿ ಇಲಾಖೆಯ ಪ್ರಮಾಣೀಕರಣಕ್ಕೆ ಒಳಪಟ್ಟು ಮತ್ತು ಅಂಥ ಕಾರಚಟುವಟಿಕೆಯು ಆ ಭೂಮಿಯನ್ನು ಮೊದಲಿಗಿಂತಲೂ ಸಾಗುವಳಿಗೆ ಕಡಿಮೆ ಯೋಗ್ಯವನ್ನಾಗಿಸತಕ್ಕದ್ದಲ್ಲವೆಂಬ ಷರತ್ತಿಗೆ ಒಳಪಟ್ಟು ಹಾಗೂ ಖನಿಜವನ್ನು ಅಕ್ಕಪಕ್ಕದ ಪ್ರದೇಶಗಳಿಗೆ ಅಪಾಯ ಒಡ್ಡದ ರೀತಿಯಲ್ಲಿ ತೆಗೆಯಲಾಗುವುದು ಎಂಬ ಷರತ್ತಿಗೆ ಸಹ ಒಳಪಟ್ಟು, ಸ್ವತಃ ಅಧಿಭೋಗದಾರನು ಪ್ರಾಮಾಣಿಕ ಬಳಕೆಗಾಗಿ ಮತ್ತು/ಅಥವಾ ಕೃಷಿ ಭೂಮಿಯ ಸುಧಾರಣೆಗಾಗಿ, ಕೃಷಿ ಕ್ಷೇತ್ರದಿಂದ ಮರಳನ್ನು ಹೊರತುಪಡಿಸಿ ಸಣ್ಣ ಖನಿಜವನ್ನು ತೆಗೆಯುವುದು:

ಪರಂತು, ಮೇಲಿನ ( ಎ) ಮತ್ತು (ಬಿ) ಖಂಡಗಳ ಸಂದರ್ಭದಲ್ಲಿ, ಖನಿಜ ಹೊರತೆಗೆಯುವ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು, ಅಧಿಕಾರ ವ್ಯಾಪ್ತಿಯುಳ್ಳ ಉಪ-ನಿರ್ದೇಶಕರಿಂದ ಅಥವಾ ಹಿರಿಯ ಭೂ-ವಿಜ್ಞಾನಿಯಿಂದ ಲಿಖಿತದಲ್ಲಿ ಕಾರನಿರ್ವಹಣಾ-ಪೂರ್ವ ಅನುಮತಿಯನ್ನು ಪಡೆಯತಕ್ಕದ್ದು ಮತ್ತು ಅಧಿಕಾರ

ವ್ಯಾಪ್ತಿಯುಳ್ಳ ಉಪ-ನಿರ್ದೇಶಕರು ಅಥವಾ ಹಿರಿಯ ಭೂ ವಿಜ್ಞಾನಿಯು ಅನುಮತಿ ನೀಡಿದ ದಿನಾಂಕದಿಂದ ಹನ್ನೆರಡು ತಿಂಗಳುಗಳ ಅವಧಿಯೊಳಗೆ ಸಣ್ಣ ಖನಿಜ ತೆಗೆಯುವ ಕಾವ್ಯವನ್ನು ಮಾಡತಕ್ಕದ್ದು;

ಮತ್ತೂ ಪರಂತು, ಮೇಲಿನ (ಬಿ) ಖಂಡದ ಸಂದರ್ಭದಲ್ಲಿ, ಕೃಷಿ ಭೂಮಿಯ ಮಾಲೀಕ ಅಥವಾ ಅಧಿಭೋಗದಾರನು ಸಣ್ಣ ಖನಿಜವನ್ನು ಮಾರಾಟ ಮಾಡಿದರೆ, ಆತನು ಅನುಸೂಚಿ-II ರಲ್ಲಿ ಹಾಗೂ ಸರಾಸರಿ ಹೆಚ್ಚುವರಿ ಕಾಲಿಕ ಸಂದಾಯದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ರಾಜ್ಯ ಸರ್ಕಾರಕ್ಕೆ ರಾಯಧನ ಸಂದಾಯ ಮಾಡತಕ್ಕದ್ದು ಮತ್ತು ಸಣ್ಣ ಖನಿಜದ ಸಾಗಣೆಯನ್ನು ಸಿಂಧುವಾದ ಖನಿಜ ಸಾಗಣೆ ಅನುಮತಿಯೊಂದಿಗೆ ಮಾತ್ರವೇ ಕೈಗೊಳ್ಳತಕ್ಕದ್ದು.

12. ಈ ಮೊದಲು ಗಮನಿಸಿದಂತೆ, ಅರ್ಜಿದಾರರು ಜಲಾಶಯದ ಅಡಿಪಾಯ ನಿರ್ಮಾಣಕ್ಕಾಗಿ ಅದೇ ಭೂಮಿಯಲ್ಲಿನ 629.92 ಎಕರೆಗಳ ಪ್ರದೇಶ ಭೂಮಿಯಿಂದ ಹೊರತೆಗೆದ ಸಣ್ಣ ಖನಿಜಗಳನ್ನು ಬಳಸಲು ಅನುಮತಿಯನ್ನು ಕೋರಿದ್ದರು.

13. 3 ನೇ ನಿಯಮದ ( 1) ನೇ ಉಪ-ನಿಯಮಕ್ಕನುಸಾರವಾಗಿ, ಕಲ್ಲು ಗಣಿಗಾರಿಕೆ ನಡೆಸುವುದರಿಂದ ಅಥವಾ ಪರವಾನಗಿ ಪಡೆಯುವುದರಿಂದ (  ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಕಾರ್ಯಚಟುವಟಿಕೆಗಳಿಗೆ ವಿನಾಯಿತಿ ನೀಡಲಾಗಿದೆ ಎಂದು 3 ಎ ನಿಯಮದ ಅವಲೋಕನದಿಂದ ಕಂಡುಬರುತ್ತದೆ.(  ಎ) ಖಂಡದ ಕೊನೆಯಲ್ಲಿ ಬಳಸಿದ " ಮತ್ತು " ಪದವನ್ನು " ಅಥವಾ " ಎಂದು ಓದಬಹುದಾಗಿದೆ ಎಂಬ ಅಡಿ ಟಿಪ್ಪಣಿಯ ಆಧಾರದ ಮೇಲೆ ನಾವು ತತ್ಕಾಲದಲ್ಲಿ ವ್ಯವಹರಿಸುತ್ತಿದ್ದೇವೆ.ಹಾಗಾಗಿ, 3 ಎ ನಿಯಮದ ಅಡಿಯಲ್ಲಿ ನೀಡಿದ ವಿನಾಯಿತಿಯು ಈ ಮುಂದಿನ ಸಂದರ್ಭಗಳಲ್ಲಿ ಅನ್ವಯವಾಗುತ್ತದೆ:

ಎ) ನೀರಿಗಾಗಿ ಬಾವಿಗಳನ್ನು ನೋಡುವುದಕ್ಕೆ, ಹೊಂಡ ಮತ್ತು ಕೆರೆಗಳಿಂದ ಹೂಳೆತ್ತುವ ಸಂಬಂಧದಲ್ಲಿ ಮರಳನ್ನು ಹೊರತುಪಡಿಸಿ ಇತರ ಖನಿಜಗಳ ಗಣಿಗಾರಿಕೆಗೆ ಮತ್ತು ಕಟ್ಟಡದ ಅಡಿಪಾಯಕ್ಕಾಗಿ ನೆಲವನ್ನು ಅಗೆಯುವುದಕ್ಕೆ ಹಾಗೂ ಅದರಿಂದ ಹೊರತೆಗೆದ ಸಣ್ಣ ಖನಿಜಗಳ ವಿಲೆಗೆ;

ಬಿ) ಅಧಿಭೋಗದಾರನು ಸ್ವತಃ ಸಣ್ಣ ಖನಿಜಗಳನ್ನು ಪ್ರಾಮಾಣಿಕ ಬಳಕೆಗಾಗಿ ಮತ್ತು ಅಥವಾ ಕೃಷಿ ಭೂಮಿಯನ್ನು ಉತ್ತಮಪಡಿಸುವುದಕ್ಕೆ ಕೃಷಿ ಇಲಾಖೆಯು ನೀಡುವ ಪ್ರಮಾಣೀಕರಣಕ್ಕೆ ಒಳಪಟ್ಟು, ಕೃಷಿ ಭೂಮಿಯಿಂದ ಸಣ್ಣ ಖನಿಜಗಳನ್ನು ತೆಗೆಯುವುದಕ್ಕಾಗಿ.

14. ಅರ್ಜಿದಾರರ ವಾದದ ಪ್ರಕಾರ, ಪ್ರಾಮಾಣಿಕ ಬಳಕೆಗಾಗಿ ಮತ್ತು ಕೃಷಿ ಭೂಮಿಯ ಸುಧಾರಣೆಗಾಗಿ ಕೃಷಿ ಕ್ಷೇತ್ರದಿಂದ ಸಣ್ಣ ಖನಿಜವನ್ನು ತೆಗೆಯುವ ಕುರಿತು ವ್ಯವಹರಿಸುವ (ಬಿ) ಖಂಡವು ಸಹ ಅನ್ವಯವಾಗುವುದಿಲ್ಲ.(  ಎ) ಖಂಡದಲ್ಲಿ ನಿರ್ದಿಷ್ಟಪಡಿಸಿರುವಂತೆ, ನಿರ್ದಿಷ್ಟ ಉದ್ದೇಶಗಳಿಗಾಗಿ ಖನಿಜಗಳನ್ನು ಹೊರತೆಗೆಯುವದರೊಂದಿಗೆ ಅದು ವ್ಯವಹರಿಸುತ್ತದೆ.ನೀರಿಗಾಗಿ ಬಾವಿಯನ್ನು ತೋಡುವುದಕ್ಕೆ (  ಎ) ಖಂಡದ ಮೊದಲ ಉದ್ದೇಶವು ಅನ್ವಯವಾಗುತ್ತದೆ.ಕೊನೆಯ ದಿನಾಂಕದಂದು, ನೀರಿಗಾಗಿ ಕೃತಕ ಜಲಾಶಯದ ನಿರ್ಮಾಣವು ಬಾವಿ ತೋಡುವುದಕ್ಕೆ ಸಮನಾದುದೆಂದು ನಿವೇದನೆ ಮಾಡಿಕೊಂಡರೂ ಸಹ, ಇಂದು ಸದರಿ ನಿವೇದನೆಯನ್ನು ಬಿಟ್ಟುಬಿಡಲಾಗಿದೆ.ಯಾವುದೇ ಸಂದರ್ಭದಲ್ಲೂ, 629.92 ಎಕರೆಗಳ ಪ್ರಮಾಣದ ಭೂಮಿಯ ಮೇಲೆ ಬಹು ದೊಡ್ಡ ಜಲಾಶಯ ನಿರ್ಮಾಣಕ್ಕೆ ಬಾವಿ ತೋಡುವುದು ಸಮನಾಗುವುದಿಲ್ಲ.ಅಂಥ ಜಲಾಶಯವನ್ನು ಬಾವಿ ಎಂದು ಹೇಳಲಾಗುವುದಿಲ್ಲ.ಎರಡನೇ ಉದ್ದೇಶವು ಹೊಂಡಗಳಿಂದ ಅಥವಾ

ಕೆರೆಗಳಿಂದ ಹೂಳೆತ್ತುವುದಕ್ಕೆ ಸಂಬಂಧಿಸಿದೆ.ಮೂರನೇ ಉದ್ದೇಶವು ಕಟ್ಟಡಗಳ ಅಡಿಪಾಯಕ್ಕೆ ನೆಲವನ್ನು ಅಗೆಯುವುದಕ್ಕೆ ಸಂಬಂಧಿಸಿದೆ.ಹಾಗಾಗಿ, ( ಎ) ಖಂಡದಲ್ಲಿ ಬಾವಿಗಳು, ಹೊಂಡಗಳು, ಕೆರೆಗಳು ಮತ್ತು ಕಟ್ಟಡಗಳು ಈ ಎಲ್ಲಾ ನಾಲ್ಕು ಪದಗಳನ್ನು ಬಳಸಲಾಗಿರುವುದರಿಂದ ಅವುಗಳ ನಡುವೆ ವ್ಯತ್ಯಾಸವನ್ನುಂಟು ಮಾಡುತ್ತದೆ.ನೆಲ ಅಗೆಯುವ ಮೂಲಕ ಹೊರತೆಗೆದ ಸಣ್ಣ ಖನಿಜಗಳನ್ನು ಅದೇ ಭೂಮಿಗೆ ಸಂಬಂಧಿಸಿದ ವ್ಯಕ್ತಿಯು ಬಳಸುತ್ತಾನೆಂಬ ಕಾರಣಕ್ಕೆ ಮಾತ್ರವೇ ( ಎ) ಖಂಡವು ಅನ್ವಯವಾಗುವುದಿಲ್ಲ.( ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಖನಿಜಗಳನ್ನು ಬಳಸಿದ್ದರೆ ಮಾತ್ರವೇ ಅದು ಅನ್ವಯವಾಗುವುದು.ಬಾವಿಗಳನ್ನು ನೋಡುವುದಕ್ಕಾಗಿ ಅಥವಾ ಹೊಂಡಗಳಿಂದ ಮತ್ತು ಕೆರೆಗಳಿಂದ ಹೂಳೆತ್ತುವುದಕ್ಕಾಗಿ ಖನಿಜಗಳನ್ನು ಬಳಸಬೇಕೆಂದು ಕೋರಿರುವ ಸಂದರ್ಭ ಇದಾಗಿಲ್ಲ.ಈಗ, ಕೃತಕ ಕೆರೆಯ ಅಡಿಪಾಯ ನಿರ್ಮಿಸುವ ಕಾರ್ಯಚಟುವಟಿಕೆಯು ಕಟ್ಟಡ ನಿರ್ಮಾಣಕ್ಕೆ ಸಮಾನವೇ ಎಂಬುದು ಪ್ರಶ್ನೆಯಾಗಿದೆ.ಇದೇ ( ಎ) ಖಂಡದಲ್ಲಿ, ಶಾಸನವು ಹೊಂಡಗಳು ಮತ್ತು ಕೆರೆಗಳನ್ನು ಹಾಗೂ ಬಾವಿಗಳನ್ನು ಉಲ್ಲೇಖಿಸಿದೆ.ಆದುದರಿಂದ, ಊಹೆಗೆ ಅವಕಾಶವೇ ಇಲ್ಲದಂತೆ, ( ಎ) ಖಂಡದಲ್ಲಿ ಬಳಸಲಾಗಿರುವ ' ಕಟ್ಟಡ ' ಎಂಬ ಪದವು, ನೀರು ಸಂಗ್ರಹಿಸುವ ಜಲಾಶಯದ ಸೃಜನೆಗೆ ಮತ್ತು ಸದರಿ ಜಲಾಶಯಕ್ಕೆ ಅಡಿಪಾಯ ನಿರ್ಮಿಸುವುದಕ್ಕೆ ಅನ್ವಯವಾಗುತ್ತದೆ.( ಎ) ಖಂಡದಲ್ಲಿ ಕೆರೆಗಾಗಿ ಅಡಿಪಾಯ ನಿರ್ಮಾಣವನ್ನು ಸೇರಿಸುವ ಉದ್ದೇಶವನ್ನು ಶಾಸನವು ಹೊಂದಿದ್ದರೆ, ಕೆರೆಯ ಹೂಳೆತ್ತುವುದಕ್ಕಾಗಿ ಅಗೆಯುವುದಕ್ಕೆ ( ಎ) ಖಂಡವು ಸಂಬಂಧಿಸಿದೆ ಎಂದು ಅದು ಹಾಗೆ ನಿರ್ದಿಷ್ಟವಾಗಿ ಹೇಳಿರುತ್ತಿತ್ತು.ಹಾಗಾಗಿ, 3 ನೇ ನಿಯಮದ ( ಎ) ಖಂಡದ ಸರಳ ಓದುವಿಕೆಯಿಂದ, ನೀರು ಸಂಗ್ರಹಣೆ ಜಲಾಶಯದ ಅಡಿಪಾಯ ನಿರ್ಮಾಣಕ್ಕಾಗಿ ಹೊರತೆಗೆದ ಸಣ್ಣ ಖನಿಜಗಳನ್ನು ಬಳಸುವುದಕ್ಕೆ ಅದು ಅನ್ವಯವಾಗುವುದಿಲ್ಲ.ಈ ಮೊದಲೇ ಹೇಳಿದಂತೆ, 3 ಎ ನಿಯಮದ (ಬಿ) ಖಂಡವು ಅನ್ವಯವಾಗುವುದಿಲ್ಲ.ಈಗ, 3 ಎ ನಿಯಮದ ಎರಡನೇ ಪರಂತುಕ್ಕೆ ಬಂದರೆ, ಅದು ( ಎ) ಖಂಡ ಅಥವಾ (ಬಿ) ಖಂಡ ಅನ್ವಯವಾಗಬಹುದಾಗಿರುವ ಸಂದರ್ಭದಲ್ಲಿ ಮಾತ್ರವೇ ಅನ್ವಯವಾಗುತ್ತದೆ.

16. ಹೀಗೆ, ಸದರಿ ನಿಯಮಗಳ 3 ನೇ ನಿಯಮದ ಅನ್ವಯತೆಯಿಂದ ವಿನಾಯಿತಿ ನೀಡುವ 3 ಎ ನಿಯಮವು ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗುವುದಿಲ್ಲ ಎಂಬುದು ಗ್ರಹಿತವಾಗುತ್ತದೆ.

17. ರಾಜ್ಯ ಸರ್ಕಾರದ ಕಾರ್ಯದರ್ಶಿಗಳು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಿಗೆ ಬರೆದದಿನಾಂಕ: 12 ನೇ ಏಪ್ರಿಲ್, 2018 ರ ಪತ್ರವು, 3 ಎ ನಿಯಮದ ಮೇರೆಗೆ ಪ್ರಕರಣವನ್ನು ಪರಿಗಣಿಸಬೇಕೆಂದು ಹೇಳುತ್ತದೆ.ಅದು ಕಾರ್ಯದರ್ಶಿಗಳ ಅಭಿಪ್ರಾಯ ಮಾತ್ರವಾಗಿದೆ.ವಿನಾಯಿತಿ ಅನ್ವಯವಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ತೀರ್ಮಾನಿಸಲು ಸದರಿ ನಿಯಮವು ಕಾರ್ಯದರ್ಶಿಗಳಿಗೆ ಅಧಿಕಾರವನ್ನು ಪ್ರದಾನ ಮಾಡುವುದಿಲ್ಲ.ಭಾರತ ಸಂವಿಧಾನದ 226 ನೇ ಅನುಚ್ಛೇದದ ಅಡಿಯಲ್ಲಿನ ರಿಟ್ ಅಧಿಕಾರವ್ಯಾಪ್ತಿಯ ಮೇರೆಗೆ, ನ್ಯಾಯಾಲಯವು, 3 ಎ ನಿಯಮವು, ಅರ್ಜಿದಾರರು ಸಣ್ಣ ಖನಿಜ ಹೊರೆತೆಗೆಯುವ ಕಾರ ಕೈಗೊಳ್ಳುವುದಕ್ಕೆ ಅನ್ವಯವಾಗುತ್ತದೆಯೇ ಎಂಬುದನ್ನು ನ್ಯಾಯಾಲಯವು ನಿರ್ಧರಿಸಬೇಕಾಗುತ್ತದೆ.ದಿನಾಂಕ: 12 ನೇ ಏಪ್ರಿಲ್, 2017 ರ ಪತ್ರವನ್ನು ಅರ್ಜಿದಾರರು ಅವಲಂಬಿಸಲು ಬಯಸಿದರೆ, ಆಗ ಸಣ್ಣ ಖನಿಜಗಳ ಗಣಿಗಾರಿಕೆಗೆ ರಾಯಧನವನ್ನು ಸಂಗ್ರಹಿಸಬೇಕೆಂದು ಅದರ 3 ನೇ ಖಂಡವು ಉಪಬಂಧಿಸುತ್ತದೆ ಎಂಬುದನ್ನು ನಾವು ಇಲ್ಲಿ ಗಮನಿಸಬಹುದು.ಸಣ್ಣ ಖನಿಜಗಳ ಗಣಿಗಾರಿಕೆ ಕಾರ್ಯಚಟುವಟಿಕೆಗಳ ಸಂಬಂಧದಲ್ಲಿ ರಾಯಧನವನ್ನು ಸಂಗ್ರಹಿಸುವುದಕ್ಕೆ ಉಪಬಂಧಿಸುವ 3 ನೇ ಖಂಡವು,ದಿನಾಂಕ: 04 ನೇ ಅಕ್ಟೋಬರ್, 2017 ರ ಕೆಲಸದ ಆದೇಶವನ್ನು ಸಹ ಒಳಗೊಳ್ಳುತ್ತದೆ.

18. ಈಗ, ಪ್ರಮೋಟರ್ ಅಂಡ್ ಬಿಲ್ಡರ್ ಅಸೋಸಿಯೇಷನ್ ಆಫ್ ಪುಣೆ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯಕ್ಕೆ ಚ ಬರುವುದಾದರೆ, ಸರ್ವೋಚ್ಚ ನ್ಯಾಯಾಲಯವು, 48 ನೇ ಪ್ರಕರಣದ ( 1) ನೇ ಚ ಉಪ-ಪ್ರಕರಣದೊಂದಿಗೆ ವ್ಯವಹರಿಸುತ್ತದೆ.ಅದನ್ನು 9 ನೇ ಕಂಡಿಕೆಯಲ್ಲಿ ಉಲ್ಲೇಖಿಸಿದ್ದು ಈ ಕೆಳಗಿನಂತೆ ಓದಲಾಗಿದೆ:

"9. ಪ್ರಶ್ನಿತ ಕಾವ್ಯಗಳನ್ನು ಮಾಡಿರುವ ಸಂಹಿತೆಯ 48 ( 7) ನೇ ಪ್ರಕರಣವನ್ನು ಮರುಪ್ರಸ್ತುತಪಡಿಸುವ ಮೂಲಕ ಉದ್ಭವಿಸಿದ ವಿವಾದವನ್ನು ವಿಶ್ಲೇಷಿಸುವೆಡೆ ನಾವು ಮುಂದುವರಿಯಬಹುದಾಗಿದೆ. "48, ಗಣಿ ಮತ್ತು ಖನಿಜಗಳ ಸಂಬಂಧದಲ್ಲಿ ಸರ್ಕಾರಿ ಸ್ವಾಮ್ಯ ( 7) ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಮತ್ತು ಅದು ವಹಿಸಿಕೊಡದಿರುವ ಕಾರನಿರ್ವಹಿಸುತ್ತಿರುವ ಅಥವಾ ಪರಿತ್ಯಕ್ತ ಗಣಿಗಳು, ಕಲ್ಲುಗಣಿಗಳು, ಹಳೆಯ ಪಾಳುಬಿದ್ದ ಸ್ಥಳಗಳು, ಕ್ಷೇತ್ರ ಬಾಂದುಗಳು (ಕ್ಷೇತ್ರಗಳ ಒಡ್ಡುಗಳ ದುರಸ್ತಿಯ ಅಥವಾ ನಿರ್ಮಾಣದ ವಾದವನ್ನಾಧರಿಸಿರಲಿ ಅಥವಾ ಯಾವುದೇ ಇತರ ವಾದಗಳನ್ನಾಧರಿಸಿರಲಿ), ನಾಲೆಗಳು, ಕೊಲ್ಲಿಗಳು, ನದಿ ಪಾತ್ರಗಳು ಅಥವಾ ಎಲ್ಲೆಲ್ಲಿ ಅವು ಸ್ಥಾಪಿತವಾಗಿವೆಯೋ ಅಂಥ ಇತರ ಸ್ಥಳಗಳಿಂದ ಕಾನೂನುಬದ್ಧ ಅಧಿಕಾರವಿಲ್ಲದೆ ಯಾವುದೇ ರೀತಿಯ ಖನಿಜ ಹೊರ ತೆಗೆಯುವ, ತೆಗೆದುಹಾಕುವ, ಸಂಗ್ರಹಿಸುವ, ಮರುಸ್ಥಳಾಂತರಿಸುವ, ತೆಗೆದುಕೊಳ್ಳುವ ಅಥವಾ ವಿಲೆ ಮಾಡುವ ಯಾರೇ ವ್ಯಕ್ತಿಯು, ಆತನ ವಿರುದ್ಧ ತೆಗೆದುಕೊಳ್ಳಬಹುದೆಂಬ ಕ್ರಮದ ಯಾವುದೇ ಇತರ ವಿಧಾನಕ್ಕೆ ಬಾಧಕವಾಗದೆ, ಕಲೆಕ್ಟರನ ಲಿಖಿತದಲ್ಲಿನ ಆದೇಶದ ಆಧಾರದ ಮೇಲೆ, ಸಂದರ್ಭಾನುಸಾರ ಹಾಗೆ ಹೊರತೆಗೆದ, ಸ ಂ ಗ್ರಹಿಸಿದ, ತೆಗೆದುಹಾಕಿದ, ಮರುಸ್ಥಳಾಂತರಿಸಿದ, ತೆಗೆದುಕೊಂಡ ಅಥವಾ ವಿಲೇ ಮಾಡಿದ ಖನಿಜಗಳ ಮಾರುಕಟ್ಟೆ ಮೌಲ್ಯದ ಮೂರರಷ್ಟು ಮೌಲ್ಯವನ್ನು ನಿರ್ಧರಿಸಿದ ಮೊತ್ತವನ್ನು ಮೀರದ ದಂಡವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

ಪರಂತು, ಹಾಗೆ ನಿರ್ಧರಿಸಿದ ಮೊತ್ತವು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇದ್ದರೆ, ಕಲೆಕ್ಟರನು ಸಂದಾಯವನ್ನು ವಿಧಿಸಿದಂತೆ ಒಂದು ಸಾವಿರ ರೂಪಾಯಿಗಳನ್ನು ಮೀರಂಥ ದಂಡವಾಗಿರಬಹುದು. "

19. ಹೀಗೆ, ಸರ್ವೋಚ್ಚ ನ್ಯಾಯಾಲಯವು ದಂಡವನ್ನು ವಿಧಿಸಲು ಕಲೆಕ್ಟರನು ಅಧಿಕಾರದ ಚಲಾವಣೆ ಮಾಡುವ ಸೀಮಿತ ವಿಷಯವನ್ನು ಕುರಿತು ಮಾತ್ರವೇ ವ್ಯವಹರಿಸಿತ್ತು.ವಾಸ್ತವವಾಗಿ, 7 ನೇ ಉಪ-ಪ್ರಕರಣವು ನಿರ್ದಿಷ್ಟವಾ , ಕಾನೂನುಬಾಹಿರವಾಗಿ ಖನಿಜ ಹೊರತೆಗೆಯುವ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ಯಾವಾಗಲೂ ಇತರ ಕ್ರಮ ವಿಧಾನವನ್ನು ಆಶ್ರಯಿಸಬಹುದು ಎಂದು ನಿಗಮನಗೊಳಿಸುತ್ತದೆ.ಕಾನೂನುಬಾಹಿರವಾಗಿ ಖನಿಜ ಹೊರತೆಗೆಯುವುದಕ್ಕೆ ಕ್ರಮ ತೆಗೆದುಕೊಳ್ಳುವ ಇತರ ವಿಧಾನಗಳಿಗೆ ಬಾಧಕವಾಗದಂತೆ, ದಂಡವನ್ನು ವಿಧಿಸಲು ಕಲೆಕ್ಟರನಿಗೆ ಅಧಿಕಾರವನ್ನು ನೀಡಲಾಗಿದೆ.ಇದನ್ನು, ಈ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರ್ಣಯಗಳನ್ನು ನೀಡಿದೆಯೆಂದು ದಂಡ ಸಂಗ್ರಹಿಸಲು ದಂಡನೆಯ ಅಧಿಕಾರದ ಹಿನ್ನೆಲೆಯಲ್ಲಿ ನೀಡಲಾಗಿದೆ.ಸದರಿ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ರಾಯಧನ ಸಂದಾಯ ಮಾಡುವ ಹೊಣೆಗಾರಿಕೆಯ ಚ ವಿಷಯದ ಕುರಿತು ವ್ಯವಹರಿಸಿರುವುದಿಲ್ಲ.3 ನೇ ನಿಯಮದ ಅನ್ವಯತೆಯಿಂದ ವಿನಾಯಿತಿ ನೀಡುವ 3 ಎ ನಿಯಮವು ಅನ್ವಯವಾಗುತ್ತದೆಯೇ ಎಂಬ ವಿಷಯದ ಕುರಿತು ನಾವು ವ್ಯವಹರಿಸಬೇಕಿದೆ.ಆದುದರಿಂದ, ಸದರಿ ಕ್ರಮವು ಅನ್ವಯತೆಯನ್ನು ಹೊಂದಿರುವುದಿಲ್ಲ.

20. ಈಗ, 24 ನೇ ಮೇ, 2017 ರ ಪತ್ರದೊಂದಿಗೆ, ಈ ಮೊದಲೇ ಸೂಚಿಸಿರುವಂತೆ, ರಾಯಧನದ ಸಂದಾಯಕ್ಕೆ ಸಂಬಂಧಿಸಿದ ಬಾಧ್ಯತೆ ಕಡೆ ಗಮನ ನೀಡಿದರೆ, ಜಲಾಶಯ ನಿರ್ಮಾಣಕ್ಕಾಗಿ ಬಳಸಿದ ಖನಿಜಗಳಿಗೆ ರಾಯಧನ ಶುಲ್ಕವಾಗಿ ಮುಂಗಡ ಹಣದ ರೂಪದಲ್ಲಿ 4,00,00,000/- ರೂ.ಗಳ ಮೊತ್ತಕ್ಕೆ ಚೆಕ್‌ಅನ್ನು ಅರ್ಜಿದಾರರು ಕಳುಹಿಸಿದ್ದಾರೆ.ಗುತ್ತಿಗೆ ಅಥವಾ ಪರವಾನಗಿಯ ನಿಬಂಧನೆಗಳು ಮತ್ತು ಷರತ್ತುಗಳ ಪ್ರಕಾರ ಉಳಿದ ರಾಯಧನವನ್ನು ಸಂದಾಯ ಮಾಡಬೇಕೆಂಬುದನ್ನು ಮೊದಲಿನ ಪತ್ರಗಳು ಮತ್ತು ದಾಖಲೆಗಳು ನಿರ್ದಿಷ್ಟವಾಗಿ ಉಲ್ಲೇಖಿಸುತ್ತವೆ.

21. ಮೇಲೆ ನಾವು ದಾಖಲಿಸಿರುವ ನಿರ್ಣಯವೆಂದರೆ, 3 ಎ ನಿಯಮದ ಅಡಿಯಲ್ಲಿನ ವಿನಾಯಿತಿಯು ಅರ್ಜಿದಾರರಿಗೆ ಅನ್ವಯವಾಗುವುದಿಲ್ಲವಾದ್ದರಿಂದ, ಕಲ್ಲು ಗಣಿಗಾರಿಕೆ ಗುತ್ತಿಗೆ ಅಥವಾ ಪರವಾನಗಿಗೆ ನೀಡಿದ ಹೊರತು, ಯಾರೇ ವ್ಯಕ್ತಿಯು ಯಾವುದೇ ಸಣ್ಣ ಖನಿಜಗಳ ಸಂಬಂಧದಲ್ಲಿ ಯಾವುದೇ ಕಲ್ಲು ಗಣಿಗಾರಿಕೆ ಕಾರ್ಯಚಟುವಟಿಕೆ ಕೈಗೊಳ್ಳತಕ್ಕದ್ದಲ್ಲ ಎಂದು ಉಪಬಂಧಿಸುವ 3 ನೇ ನಿಯಮವು ಅನ್ವಯವಾಗುತ್ತದೆ.ಹಾಗಾಗಿ, ಸಣ್ಣ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು ಕೈಗೊಳ್ಳಲು, ಅರ್ಜಿದಾರನು ಪರವಾನಗಿಯನ್ನು ಪಡೆದುಕೊಳ್ಳುವ ಬಾಧ್ಯತೆ ಹೊಂದಿದ್ದನು.ಸದರಿ ನಿಯಮಗಳ 3 ನೇ ನಿಯಮದ ಉಲ್ಲಂಘನೆಗಾಗಿ ಸಣ್ಣ ಖನಿಜಗಳನ್ನು ಹೊರತೆಗೆಯುವ ಕಾರ ಕೈಗೊಂಡಿದ್ದಕ್ಕಾಗಿ ಅರ್ಜಿದಾರನ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲು, ಸಣ್ಣ ಖನಿಜಗಳನ್ನು ಹೊರತೆಗೆಯಲು ಅರ್ಜಿದಾರನೊಂದಿಗೆ ಗುತ್ತಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು ಅಥವಾ ಪರವಾನಗಿ ನೀಡಲಾಗಿತ್ತು ಎಂಬ ಊಹೆಯ ಆಧಾರದ ಮೇಲೆ ಮುಂದುವರಿಯುವ ಮೂಲಕ 36 ನೇ ನಿಯಮಕ್ಕೆ ಅನುಸಾರವಾಗಿ ರಾಯಧನವನ್ನು ಮತ್ತು ಇತರ ಮೊತ್ತಗಳನ್ನು ಸಂದಾಯ ಮಾಡಲು ತಗಾದೆ ಮಾಡಲಾಗಿತ್ತು.ರಾಯಧನದ ರೂಪದಲ್ಲಿ ತಗಾದೆ ಮಾಡಲಾದ ಮೊತ್ತವು 1994 ರ ಸದರಿ ನಿಯಮಗಳ ಅನುಸೂಚಿಯ ಪ್ರಕಾರವಾಗಿಲ್ಲ ಎಂಬುದು ಅರ್ಜಿದಾರರ ವಾದವಾಗಿಲ್ಲ.

22. ಹೀಗೆ, ಅರ್ಜಿದಾರರು ಕಲ್ಲು ಗಣಿಗಾರಿಕೆ ಗುತ್ತಿಗೆ ಅಥವಾ ಪರವಾನಗಿಯನ್ನು ಪಡೆಯುವ ಮೂಲಕ 3 ನೇ ನಿಯಮವನ್ನು ಅನುಪಾಲಿಸದೆ ಸಣ್ಣ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು ನಿರ್ವಹಿಸಬಾರದಾಗಿತ್ತು.ಪರವಾನಗಿ ಇಲ್ಲದೆ ಸಣ್ಣ ಖನಿಜಗಳನ್ನು ಕಾನೂನುಬಾಹಿರವಾಗಿ ಹೊರತೆಗೆದಿದ್ದಾಗ್ಯೂ, ಅರ್ಜಿದಾರರು ಪರವಾನಗಿ ಅಥವಾ ಗುತ್ತಿಗೆ ಪಡೆದ ನಂತರ ಕಾನೂನುಬದ್ಧವಾಗಿ ಸಣ್ಣ ಖನಿಜ ಹೊರತೆಗೆಯುತ್ತಿದ್ದಾರೆಂಬ ದೃಷ್ಟಿಕೋನದ ಆಧಾರದ ಮೇಲೆ ವ್ಯವಹರಣೆ ಮೂಲಕ ರಾಯಧನಕ್ಕೆ ತಗಾದೆ ಮಾಡುವ ಮೂಲಕ ರಾಜ್ಯ ಸರ್ಕಾರವು, ಉದಾರತೆ ತೋರಿದೆ.ಅರ್ಜಿದಾರರು ಬಹಳ ಹಿಂದೆ ಕಾರ್ಯನಿರ್ವಹಿಸಿದ್ದ ಕೆಲಸದ ಆದೇಶದ ರೂಪದಲ್ಲಿ ರಾಯಧನಕ್ಕೆ ಅಂತಿಮ ತಗಾದೆಯನ್ನು ಇಡಲಾಗಿದೆ.

23. ಈ ಸಂದರ್ಭಗಳ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ರಾಯಧನಕ್ಕಾಗಿ ಮಾಡಿದ ತಗಾದೆಯಲ್ಲಿ ಯಾವುದೇ ಕಾನೂನುಬಾಹಿರತೆಯು ನಮಗೆ ಕಂಡುಬಂದಿರುವುದಿಲ್ಲ.ಅದರ ಹೊರತಾಗಿಯೂ, ಅರ್ಜಿದಾರರು ಭಾರತ ಸಂವಿಧಾನದ ಕರ್ನಾಟಕ ತೀರ್ಪುಗಳ ವರದಿ 2021 226 ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಕೋರಿದ್ದಾರೆ ಎಂಬುದನ್ನು ನಾವು ಇಲ್ಲಿ ಗಮನಿಸಬೇಕಿದೆ.ಅರ್ಜಿದಾರರು ಗುತ್ತಿಗೆ ಅಥವಾ ಪರವಾನಗಿ ಪಡೆಯುವ ಮೂಲಕ, ಸದರಿ ನಿಯಮಗಳ 3 ನೇ ನಿಯಮವನ್ನು ಅನುಪಾಲಿಸದೆ ಸಣ್ಣ ಖನಿಜಗಳನ್ನು ಹೊರತೆಗೆಯುವ ಕಾಮಗಾರಿಯನ್ನು ನಿರ್ವಹಿಸಿದ್ದಾರೆ.ಅರ್ಜಿದಾರರು ಸದರಿ ನಿಯಮಗಳ 3 ನೇ

ನಿಯಮವನ್ನು ಅನುಪಾಲಿಸಿದ್ದಾರೆ ಎಂಬ ದೃಷ್ಟಿಕೋನದಿಂದ ರಾಜ್ಯವು ರಾಯಧನವನ್ನು ವಿಧಿಸಿದೆ.ಆದುದರಿಂದ, ಹಾಗಿಲ್ಲದಿದ್ದರೂ, ಭಾರತ ಸಂವಿಧಾನದ 226 ನೇ ಅನುಚ್ಛೇದದ ಅಡಿಯಲ್ಲಿನ ಅಧಿಕಾರವ್ಯಾಪ್ತಿಯಿಂದ ದಂಡ ವಿಧಿಸುವುದನ್ನು ಪ್ರಶ್ನಿಸುವುದಕ್ಕೆ ಅರ್ಜಿದಾರರಿಗೆ ಅನುಮತಿಸಲಾಗುವುದಿಲ್ಲ.

24. ತದನುಸಾರವಾಗಿ, ನಾವು ಈ ಮುಂದಿನ ಆದೇಶವನ್ನು ಹೊರಡಿಸಿದ್ದೇವೆ:

( i) ರಿಟ್ ಅರ್ಜಿಯನ್ನು ತಿರಸ್ಕರಿಸಲಾಗಿದೆ.

(ii) ಅರ್ಜಿಯನ್ನು ವಿಲೆ ಮಾಡಿದ ಹಿನ್ನೆಲೆಯಲ್ಲಿ, ತಡೆಯಾಜ್ಞೆ ಕೋರಿ ಸಲ್ಲಿಸಿದ ಐ.ಎ.ಸಂಖ್ಯೆ: 1/2019 ಅಸ್ತಿತ್ವದಲ್ಲಿರುವುದಿಲ್ಲ ಮತ್ತು ಅದನ್ನು ವಿಲೆ ಮಾಡಲಾಗಿದೆ.